ಶ್ರೀ ಎಂ ಪಿ. ಈಶ್ವರಪ್ಪ.—ಭಾರತದ ರೈತ, ಕರ್ನಾಟಕದ ರೈತ ಎಂದು ಪಿತಕ್ಕೆ ವ್ಯತ್ಯಾಸ ಮಾಡಿಕೊಳ್ಳಬೇಕು. ಬೇರೆ ಬೇರೆ ರಾಜ್ಯಗಳು ಅನುಕೂಲ ಮಾಡಿಕೊಟ್ಟಿವೆ. ನಮ್ಮ ರಾಜ್ಯ ಸರಕಾರ ಕಣ್ಣು ಬಿಟ್ಟು ನೋಡುತ್ತಿಲ್ಲ. ತೀರಾ ಅನ್ಯಾಯ ಮಾಡುತ್ತಿದ್ದಾರೆ.

(ಭಾರತೀಯ ಜನತಾ ಪಕ್ಷದ ಸದಸ್ಯರು ಸಭಾಧ್ಯಕ್ಷರ ಪೀಠದ ಮುಂದಿರುವ ವೆಲ್‌ನಲ್ಲಿ ಧರಣಿ ಕುಳಿತರು).

ಶ್ರೀ ಟಿ.ಎನ್. ನರಸಿಂಹಮೂರ್ತಿ.—ಒಮ್ಮೆ ಮಾತನ್ನು ಸರಕಾರದ ಪರವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಭಾರತೀಯ ಜನತಾ ಪಕ್ಷದ ಸದಸ್ಯರು ಈ ವಿಚಾರ ಪ್ರಸ್ತಾಪ ಮಾಡುತ್ತಿರುವ ಸಮಯದಲ್ಲಿ ರೈತರ ಬಗ್ಗೆ ಚಿಂತನೆ, ರೈತರ ಪ್ರಗತಿ ವಿಚಾರದಲ್ಲಿ ಕಾಂಗ್ರೆಸ್ ಪಕ್ಷ ದೊಡ್ಡ ಇತಿಹಾಸ ಹೊಂದಿರತಕ್ಕಂಥ ಪಕ್ಷ. ಈ ಪಕ್ಷ ರಾಷ್ಟ್ರಮಟ್ಟದಲ್ಲಿ ಸರಕಾರ ನಡೆಸುತ್ತಿದ್ದಾಗ ರೈತರ ಬಗ್ಗೆ ರಾಷ್ಟ್ರೀಯ ನೀತಿ ನಿರೂಪಣೆ ಮಾಡಿದೆ. ರಾಜ್ಯದಲ್ಲೂ ಕೂಡಾ ಅನೇಕ ಪ್ರಗತಿಪರವಾದ ಕಾರ್ಯಕ್ರಮಗಳನ್ನು ಕೈಗೊಂಡಿದ್ದೇವೆ. ಹೀಗೆ ಇರುವಾಗ ಮಾತಾಡ್ತಿದ್ದರೆ ಈ ಸರಕಾರ ದ್ರೋಹ ಮಾಡುತ್ತಿದೆ ಎನ್ನುವುದು ಅನುಚಿತ ಎಂದು ಹೇಳುತ್ತೇನೆ. ಇದು ನಾಗರಿಕ ಭಾಷೆ ಅಲ್ಲ ಎಂದು ಹೇಳಿದರೆ ತಾವು ತಪ್ಪು ತಿಳಿದುಕೊಳ್ಳುವುದಿಲ್ಲ ಎಂದು ಹೇಳುತ್ತೇನೆ. ನಮ್ಮ ಪಕ್ಷ ನಿನ್ನೆ ಹುಟ್ಟಿದ ಪಕ್ಷ ಅಲ್ಲ. ನೂರಾರು ವರ್ಷಗಳ ಇತಿಹಾಸ ಇರತಕ್ಕಂಥ ಪಕ್ಷ. ರಾಷ್ಟ್ರದ ರೈತರು ಈ ಪಕ್ಷಕ್ಕೆ ಬೆನ್ನೆಲುಬಾಗಿ ಇರತಕ್ಕಂಥಾದ್ದನ್ನೂ ಕೂಡ ಈ ಸಂದರ್ಭದಲ್ಲಿ ಸ್ಮರಣೆ ಮಾಡಿಕೊಳ್ಳಬೇಕೆಂದು ಈ ಮಾತನ್ನು ಹೇಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೇ, ಒಂದು ಮಾತು. ಅವರ ಮಾತು ರೆಕಾರ್ಡ್‌ನಲ್ಲಿ ಹೋಗಿದೆ.

ಶ್ರೀ ಟಿ.ಎನ್. ನರಸಿಂಹಮೂರ್ತಿ.—ಕೇಂದ್ರದಲ್ಲಿ ಆಡಳಿತ ನಡೆಸಿದಂಥ ಈ ಪಕ್ಷ ಅತ್ಯಧಿಕವಾದ ಬೆಂಬಲವನ್ನು ಪಡೆದಿರತಕ್ಕಂಥ ಪಕ್ಷ ಎಂಬ ಮಾತನ್ನು ಹೇಳುತ್ತಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಸನ್ಮಾನ್ಯ ಅಧ್ಯಕ್ಷರೇ, ಬಿ.ಜೆ.ಪಿ, ಸದಸ್ಯರಾಗಿರತಕ್ಕಂಥ ಮಾನ್ಯ ಯಡಿಯೂರಪ್ಪನವರು ಮತ್ತು ಅವರ ಸ್ನೇಹಿತರುಗಳು, ರೈತರ ಸಾಲ ಮಾನ್ಯ ಮಾಡುವ ಪ್ರಶ್ನೆಯ ಬಗ್ಗೆ ನಿನ್ನೆಯಿಂದ ಈ ಸದನದಲ್ಲಿ ಧರಣಿ ಕುಳಿತಿದ್ದಾರೆ. ರಾಜ್ಯ ಮಟ್ಟದಲ್ಲಿ ಹೇಳಬೇಕೆಂದರೆ, ಅವರು ಆಡಳಿತ ಪಕ್ಷಕ್ಕೆ ವಿರೋಧದಲ್ಲಿರತಕ್ಕಂಥವರು. ಅವರು ಈ ಸದನದಲ್ಲಿ ಧರಣಿ ಕುಳಿತಿರುವಾಗ ನಾವು ಕುಳಿತುಕೊಂಡು ಕಲಾಪದಲ್ಲಿ ಭಾಗವಹಿಸತಕ್ಕಂಥಾದ್ದು ಸ್ವಲ್ಪ ಮುಜುಗರವಾಗುತ್ತದೆ. ಆದರೆ ಯಡಿಯೂರಪ್ಪನವರು ಈ ಸಭೆಗೆ ಬರುವುದಕ್ಕೆ ಮುಂಚೆ ಅವರನ್ನು ನಾನು ಮತ್ತು ಪಕ್ಷೇತರ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಜನತಾ ಪಕ್ಷದ ಸದಸ್ಯರಾದ ವೆಂಕಟೇಶ್‌ರವರು ಭೇಟಿ ಮಾಡಿ, ಅವರಲ್ಲಿ ಮನವಿ ಮಾಡಿಕೊಂಡಿದ್ದೇವೆ. ತಾವು ದಯವಿಟ್ಟು ಧರಣಿ ಮಾಡುವುದು ಬೇಡ. ಧರಣಿ ಮಾಡುವುದರಿಂದ ನಾವು ಏನು ಕಾರ್ಯ ಸಾಧನೆ ಮಾಡಬೇಕೆಂದಿದ್ದೇವೆ ಅದು ಆಗುವುದಿಲ್ಲ ಎಂಬ ಮಾತನ್ನು ಅವರ ಗಮನಕ್ಕೆ ತಂದಿದ್ದೇವೆ. ನಮ್ಮನ್ನು ಅವರು ಟೀಕೆ ಮಾಡಿದ್ದಾರೆ. ಟೀಕೆ ಮಾಡತಕ್ಕಂಥ ಹಕ್ಕು ಅವರಿಗೆ ಇದೆ. ಅವರ ಹಂಗು ಹಾಗೂ ಮುಲಾಜಿನಲ್ಲಿ ನಾವು ಇವತ್ತು ಕೇಂದ್ರ ಸರಕಾರವನ್ನು ನಡೆಸುತ್ತಿದ್ದೇವೆ. ಹಾಗೆಂದ ತಕ್ಷಣ ಕೇಂದ್ರ ಸರಕಾರ ಏನು ಒಂದು ರೈತರ ಸಮುದಾಯಕ್ಕೆ ಅನುಕೂಲ ಮಾಡಬೇಕೆಂಬ ದೃಷ್ಟಿಯಿಂದ ಒಂದು ಕಾರ್ಯಕ್ರಮ ಹಾಕಿಕೊಂಡಿದೆ. ಆ ಕಾರ್ಯಕ್ರಮ ಜಾರಿಗೆ ತರುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಒಪ್ಪಿದ್ದಾರೆ ಅದನ್ನು ನಾವು ಸ್ವಾಗತ ಮಾಡಿರತಕ್ಕಂಥಾದ್ದು ನಿಜ ಸ್ವಾಗತ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಅದು ಅಸೌಜನ್ಯದ ಪರಮಾವಧಿಯಾಗುತ್ತದೆ. ಅದನ್ನು ಸ್ವಾಗತ ಮಾಡಿದ್ದೇವೆ. ರೈತರ ಸಮುದಾಯಕ್ಕೆ ಸಹಾಯ ಮಾಡಬೇಕೆಂಬುದು ನಮ್ಮ ನಿಮ್ಮ ಎಲ್ಲರ ಉದ್ದೇಶವಾಗಿದೆ. ನಾನು ನಿಮ್ಮಲ್ಲಿ ಮನವಿ ಮಾಡಿಕೊಳ್ಳುವುದು ಏನೆಂದರೆ ರಾಷ್ಟ್ರೀಯರಂಗದ ಸರಕಾರ ರೈತರ ಕಣ್ಣಿಗೆ ಮಣ್ಣೆರಚುವುದಕ್ಕೆ ಪ್ರಯತ್ನ ಮಾಡುತ್ತಿದೆ, ರೈತರಿಗೆ ಏನೂ ಸಹಾಯ ಮಾಡಿಲ್ಲ ಎಂದರೆ ಅದು ತಪ್ಪಾಗುತ್ತದೆ. ಈ ವೇದಿಕೆಯಲ್ಲಿ ಹೇಳುವ ಮಾತೂ ಅದಲ್ಲ.

ಅದು ಈ ವೇದಿಕೆಯಲ್ಲಿ ಹೇಳತಕ್ಕಂಥ ಮಾತಲ್ಲ. ನಾವೂ, ನೀವೂ ಒಟ್ಟಿಗೆ ಹೋಗಿ, ರಾಷ್ಟ್ರೀಯ ರಂಗದ ಸರ್ಕಾರದ ಮೇಲೆ ಒತ್ತಡವನ್ನು ತರೋಣ. ನೀವು ಕೇಂದ್ರ ಸರ್ಕಾರದಲ್ಲಿ ಇಲ್ಲದೇ ಹೋದರೂ ಸಹಿತ, ಅಲ್ಲಿರತಕ್ಕಂಥ ಸರ್ಕಾರದ ನೀತಿ ನಿರೂಪಣೆಗಳಲ್ಲಿ ಪ್ರಮುಖವಾದ ಪಾತ್ರವನ್ನು ವಹಿಸಿರತಕ್ಕಂಥವರು. ಆದುದರಿಂದ ದಯವಿಟ್ಟು ಈ ವೇದಿಕೆಯನ್ನು ಕೇಂದ್ರ ಸರ್ಕಾರವನ್ನು ಟೀಕೆ ಮಾಡುವುದಕ್ಕೆ ಉಪಯೋಗ ಮಾಡತಕ್ಕಂಥ ಅಗತ್ಯ ಇಲ್ಲ. ಕೇಂದ್ರ ಸರ್ಕಾರ ತಾವು ಹೇಳಿದಹಾಗೆ ರೈತ